ಶ್ರೀ ಜಿ. ಬಿ. ಶಂಕರರಾವ್.—ಇದು ಪರಿಶೀಲನಾರ್ಹವಾದ ಸಲಹೆ.

ಶ್ರೀ ಬಿ.ವಿ. ಕಕ್ಕಿಲಾಯ.—ನಮ್ಮ ತಾಲ್ಲೂಕಿನಲ್ಲಿ, ತಾಲ್ಲೂಕ್ ಬೋರ್ಡ್‌ನಿಂದ ವಹಿಸಿಕೊಂಡಂತಹ ೧೪೦ ಶಾಲೆಗಳಿಗೆ ಕಟ್ಟಡಗಳು ಆಗಬೇಕಾಗಿವೆ. ನಮ್ಮ ಕ್ಷೇತ್ರದಲ್ಲಿ ಈಗ ಶಾಲಾ ಕಟ್ಟಡಗಳು ಇಲ್ಲದೇ ಮಕ್ಕಳಿಗೆ ಬಹಳ ತೊಂದರೆಯಾಗಿದೆ. ಆ ಶಾಲೆಗಳಿಗೆ ಕಟ್ಟಡಗಳನ್ನು ಒದಗಿಸುವುದಕ್ಕೆ ಏನಾದರೂ ಆದ್ಯತೆಯನ್ನು ಕೊಟ್ಟಿದ್ದೀರಾ ? ಮತ್ತು ಖಾಸಗಿಯವರು ಹೈಸ್ಕೂಲನ್ನು ತೆರೆಯಬೇಕಾದರೆ ಅವರಿಂದ ೫೦,೦೦೦ ಅಥವಾ ೬೦,೦೦೦ ರೂಪಾಯಿಗಳನ್ನು ಪಡೆದುಕೊಳ್ಳುತ್ತೀರಿ. ಅಂಥವರಿಗೆ ಶಾಲಾ ಕಟ್ಟಡವನ್ನು ಒದಗಿಸುವುದಕ್ಕೆ ತಾವು ಏನಾದರೂ ಯೋಜನೆಯನ್ನು ಮಾಡಿದ್ದೀರಾ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಏನು ಖಾಸಗೀ ಶಾಲಾ ಮ್ಯಾನೇಜ್‌ಮೆಂಟಿನಿಂದ ಹಣ ಪಡೆಯಲಾಗುತ್ತಿದೆ ಎಂದು ಹೇಳುತ್ತಿದ್ದಾರೆ, ಅದು ಸ್ಪೆಬಿಲಿಟಿ ಫಂಡ್. ಮೇನೇಜ್‌ಮೆಂಟ್‌ನವರು ಶಿಕ್ಷಕರಿಗೆ ಸಂಬಳವನ್ನು ಕೊಡಲಾಗದಿದ್ದರೆ ಅದನ್ನು ಉಪಯೋಗಿಸಲಾಗುತ್ತದೆ. ಆ ಫಂಡ್‌ನಿಂದ ಕಟ್ಟಡವನ್ನು ಕಟ್ಟುವುದಕ್ಕೆ ಬರುವುದಿಲ್ಲ. ಕಟ್ಟಡವನ್ನು ಕಟ್ಟಿಸುವುದಕ್ಕೆ ಅವರು ಬೇರೆ ಹಣವನ್ನು ಕೊಟ್ಟರೆ ನೋಡುತ್ತೇವೆ.

Denationalisation of rural bus routes in the State

650 SRI B. A. MOHIDIN (Bantwal).—Will the Minister for Transport and Minor Irrigation be pleased to state :—

(a) whether the Government is considering the question of denationalisation of some of the rural busroutes all over the State ;

(b) if so, (what) the reasons for the same ?

SRI M. M. J. SADYOJATHA (Minister for Transport and Minor Irrigation),—

(a)and(b)—The question of denationalising certain routes has never been seriously considered by the Government, but suggestions have been made from time to time that this be done. This is because owing to the large part of Karnataka State Road Transport Corporation fleet being old and due for replacement, the Karnataka State Road Transport Corporation was facing high level of cancellation of schedules and was not able to satisfactorily meet the needs of the public in certain parts of the State.

SRI B. A. MOHIDEEN.—Sir, I want a categorical answer about de-nationalisation.

SRI M. M. J. SADYOJATHA.—It is under consideration.

SRI RAMESH KUMAR.—Sir, Hon'ble Minister cannot be evasive in his reply He has to specifically say whether the Government sticks to the policy of nationalisation or whether they are going to denationalise. It is a policy matter.

SRI R. GUNDU RAO (Hon'ble Chief Minister).—Sir, I think a similar question was raised by Hon'ble Member Sri K. Bhaskar Naidu in a different manner. I quite agree with my honourable friend that

they want to know whether the Government is seriously thinking of de-nationalisation of the routes in the rural areas. Definitely, it is a matter to be thought of very seriously. When we nationalise the entire routes the situation of availability of chassis, traffic and other considerations were there. But, now the difficulty about non-availability of chasis, enhancement of diesel and petrol rates. The rate of diesel and petrol is increasing every quarterly. We have to take into consideration all these factors. Now, it is not so easy, because we have to think on those lines and the Government has to take a decision-of course. in consultation with all of you.

ಶ್ರೀ ಬಿ. ವಿ. ಕಕ್ಕಿಲಾಯ.—ಪ್ರಶ್ನೆಗೆ ಉತ್ತರವನ್ನು ನೋಡಿದರೆ, ಸಾರಿಗೆ ಸಂಸ್ಥೆ ಸಂಪೂರ್ಣವಾಗಿ ನಿರುಪಯೋಗವಾಗಿದೆ, ಸರಿಯಾಗಿ ನಡೆಯುತ್ತಾ ಇಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆಂಬ ಅಭಿಪ್ರಾಯ ಮೂಡುತ್ತದೆ. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ? ರಾಷ್ಟ್ರೀಕರಣ ಸ್ಥಿತಿಯಿಂದ ತೆಗೆದುಹಾಕುವ ಪ್ರಶ್ನೆಯ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲಿಸಿಲ್ಲ ಎಂದು ಹೇಳುತ್ತಿದ್ದಾರೆ. ಅವರು ಕೊಟ್ಟಿರುವ ಉತ್ತರವನ್ನು ನೋಡಿ.

> "ಕೆಲವು ಮಾರ್ಗಗಳನ್ನು ರಾಷ್ಟ್ರೀಕರಣ ಸ್ಥಿತಿಯಿಂದ ತೆಗೆದುಹಾಕುವ ಪ್ರಶ್ನೆಯಬಗ್ಗೆ ಸರ್ಕಾರದವರು ಎಂದೂ ತೀವ್ರವಾಗಿ ಪರಿಶೀಲಿಸಿಲ್ಲ ಆದರೆ ಹಾಗೆ ಮಾಡುವಂತೆ ಕಾಲಕಾಲಕ್ಕೆ ಸಲಹೆಗಳನ್ನು ಮಾಡಲಾಗಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳೆಲ್ಲ ಅತಿ ದೊಡ್ಡ ಪ್ರಮಾಣದಲ್ಲಿ ಹಳೆಯವುಗಳಾಗುತ್ತಾ ಬಂದುದರಿಂದ ಹಾಗೂ ಅವುಗಳ ಬದಲಿಗೆ ಹೊಸ ಬಸ್ಸುಗಳನ್ನು ಹಾಕಬೇಕಾದ ಸಮಯ ಬಂದಿರುವುದರಿಂದ, ಕರ್ನಾಟಕ ರಸ್ತೆ ಸಾರಿಗೆ ನಿಗಮವು ನಿಶ್ಚಿತ ಸಮಯಕ್ಕೆ ಸರಿಯಾಗಿ ಓಡಿಸಬೇಕಾದ ಬಸ್ಸುಗಳ ಓಡಾಟವನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ರದ್ದುಪಡಿಸಬೇಕಾಗಿ ಬಂದಿರುವುದರಿಂದ, ಮತ್ತು ರಾಜ್ಯದ ಕೆಲವೊಂದು ಭಾಗಗಳಲ್ಲಿರುವ ಸಾರ್ವಜನಿಕರ ಅವಶ್ಯಕತೆಗಳನ್ನು ಸಮರ್ಪಕವಾಗಿ ಪೂರೈಸಲು ಸಾಧ್ಯವಾಗುತ್ತಿಲ್ಲದಿರುವುದರಿಂದ, ರಾಜ್ಯದ ಕೆಲವು ಭಾಗಗಳಲ್ಲಿ ಸಾರ್ವಜನಿಕರ ಅಗತ್ಯಗಳನ್ನು ಪೂರೈಸಲು ಅಸಮರ್ಪಕವಾಗಿದೆ''

ಎಂದು ಉತ್ತರವನ್ನು ಕೊಡಲಾಗಿದೆ. ಸ್ವಲ್ಪ ಇದನ್ನು ಯೋಚನೆ ಮಾಡಬೇಕು. ಈ ರೀತಿ ಉತ್ತರ ಕೊಡುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಡಿ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ. ಈ ರೀತಿ ಉತ್ತರ ಕೊಟ್ಟರೆ ನಮ್ಮ ಸಂಶಯಗಳನ್ನು ನಿವಾರಣೆ ಮಾಡುವುದಕ್ಕಾಗುವುದಿಲ್ಲ. ನಿಮ್ಮ ಉತ್ತರ ನೋಡಿದರೆ ಖಾಸಗಿಯವರಿಗೆ ಬಿಟ್ಟುಕೊಡುವುದಕ್ಕೆ ತೀರ್ಮಾನ ಮಾಡಿದ್ದೀರೇನೋ ಅನ್ನಿಸುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಮುಖ್ಯ ಮಂತ್ರಿಗಳು ಅಚ್ಚಾಗಿರುವಂತಹ ಉತ್ತರಕ್ಕಿಂತ ಹೆಚ್ಚೇನೂ ಹೇಳಲಿಲ್ಲ. ಡೀಸೆಲ್ ಮತ್ತು ಪೆಟ್ರೋಲ್ ಬೆಲೆ ಚಾಸ್ತಿಯಾಗಿರುವುದರಿಂದ ಸರ್ಕಾರದ ರಾಷ್ಟ್ರೀಕರಣದ ನೀತಿಯಲ್ಲಿ ಬದಲಾವಣೆ ಏನಾದರೂ ಆಗಿದೆಯೇ ? ಹಳ್ಳಿಗಾಡಿನ ರಸ್ತೆಗಳನ್ನು ರಾಷ್ಟ್ರೀಕರಣ ಮಾಡಿ ಬಸ್ಸುಗಳನ್ನು ಓಡಿಸುತ್ತೇವೆಂದು ಕರಾರುವಾಕ್ಕಾಗಿ ಹೇಳಿಲ್ಲ. ಆದ್ದರಿಂದ ಸರ್ಕಾರದ ರಾಷ್ಟ್ರೀಕರಣದ ಮೂಲಭೂತ ನೀತಿಯಲ್ಲಿ ಏನಾದರೂ ಬದಲಾವಣೆಯಾಗಿದೆಯೆ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಕರಣದ ಮೂಲಭೂತವಾದ ನೀತಿಯಲ್ಲಿ ಬದಲಾವಣೆಯಾಗಿಲ್ಲ. ಅದನ್ನು ಕಾರ್ಯಗತಗೊಳಿಸುವಾಗ ಪ್ರತಿ ಹಂತದಲ್ಲಿಯೂ ಯೋಚನೆ ಮಾಡಬೇಕಾಗುತ್ತದೆ. ಇಡೀ ಭಾರತದಲ್ಲಿ ಅಶೋಕ ಲೇಲ್ಯಾಂಡ್ ಮತ್ತು ಟಾಟಾ ಮರ್ಸಿಡೀಸ್ ಬೆಂಜ್ ಈ ಎರಡು ಕಂಪನಿಗಳು ಮಾತ್ರ ಚಾಸಿಗಳನ್ನು ತಯಾರು ಮಾಡುತ್ತಿವೆ. ಕಳೆದ ಮೂರು ನಾಲ್ಕು ವರ್ಷಗಳಿಂದ ಯಾವ ಪ್ರಮಾಣದಲ್ಲಿ ಪ್ರೊಡಕ್ಷನ್ ಆಗುತ್ತಿತ್ತೋ ಅಷ್ಟು ಪ್ರಮಾಣದಲ್ಲಿ ಕೆಲಸ ಗಾರರ ಮುಷ್ಕರಗಳಿಂದಾಗಿ ಆಗುತ್ತಿಲ್ಲ, ಸರ್ಕಾರದ ಕಳೆದ ೧೦ ವರ್ಷಗಳ ಹಳೆಯ ಬಸ್ಸುಗಳನ್ನು ಕೂಡ ಬದಲಾವಣೆ ಮಾಡುವುದಕ್ಕಾಗಿಲ್ಲ. ಸಾರಿಗೆ ಮಂತ್ರಿಗಳು ಉತ್ತರ ಕೊಟ್ಟಿರುವುದು ನಿಜ. ತಪ್ಪೇನೂ ಇಲ್ಲ. ವರ್ಷ ವರ್ಷ ಬಸ್ಸುಗಳನ್ನು ರೀಪ್ಲೇಸ್ ಮಾಡಬೇಕಾದರೆ ನಮಗೆ ಚಾಸಿಗಳು ದೊರೆಯುತ್ತಿಲ್ಲ.

ನಾನು ಮಂತ್ರಿಯಾಗಿದ್ದಾಗಲೂ ಕೂಡ ಈ ಮಾತನ್ನು ಹೇಳಿದ್ದೇನೆ. ಇಲ್ಲಿ ಹಣದ ಕೊರತೆ ಇಲ್ಲ. ಸರ್ಕಾರ ಸಾಲ ಕೊಡುತ್ತದೆ. ಬ್ಯಾಂಕುಗಳು ಸಾಲ ಕೊಡುತ್ತವೆ. ಜೀವ ವಿಮೆ ಕಾರ್ಪೊರೇಷನ್ ಸಾಲ ಕೊಡುತ್ತದೆ. ಆದರೆ ಎಷ್ಟು ಹಣ ಕೊಟ್ಟರೂ ಬಾಸಿಗಳು ಸಿಗುತ್ತಾ ಇಲ್ಲ. ಈ ಮಧ್ಯೆ ಜನಸಂಖ್ಯೆ ಕೂಡ ಜಾಸ್ತಿಯಾಗುತ್ತಾ ಇದೆ. ಆದರೂ ಕೂಡ ಮೂಲಭೂತ ನೀತಿಯಲ್ಲಿ ಯಾವ ರೀತಿಯ ಬದಲಾವಣೆ ಯಾಗಿಲ್ಲ. ಹೀಗಾದರೆ ಪರಿಸ್ಥಿತಿಯನ್ನು ಹೇಗೆ ಸರಿ ಮಾಡಬೇಕು ? ಮೈಸೂರು–ಬೆಂಗಳೂರು ನಡುವೆ ೧೨೦ ಬಸ್ಸುಗಳು ಓಡುತ್ತಿವೆ ಪ್ರತಿ ೧೦ ನಿಮಿಷಕ್ಕೆ ಒಂದು ಬಸ್ಸು ಓಡಿದರೂ ಬಸ್ ನಿಲ್ದಾಣದಲ್ಲಿ ೫೦೦–೧೦೦೦ ಜನ ಇರುತ್ತಾರೆ. ಆದ್ದರಿಂದ, ತಾತ್ಕಾಲಿಕವಾಗಿ ಪರಿಸ್ಥಿತಿಯನ್ನು ಬದಲಾವಣೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು. ಯಾವ ರೀತಿಯಲ್ಲಿ ಸುಧಾರಣೆ ಮಾಡಬೇಕು ಎಂಬುದು ಸರ್ಕಾರದ ಗಮನದಲ್ಲಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯ ಮಂತ್ರಿಗಳ ತರ್ಕ ನನಗೆ ಅರ್ಥವಾಗಲಿಲ್ಲ. ಮಹಾರಾಷ್ಟ್ರ, ಗುಜರಾತ್ ಹಾಗೂ ಹರಿಯಾಣ ರಾಜ್ಯಗಳವರು ಪೂರ್ತಿಯಾಗಿ ರಾಷ್ಟ್ರೀಕರಣ ಮಾಡಿದ್ದಾರೆ. ಒಂದೇ ಒಂದು ಮಾರ್ಗವನ್ನೂ ಖಾಸಗಿಯವರಿಗೆ ಕೊಟ್ಟಿಲ್ಲ. ೧೯೫೬ನೇ ಇಸವಿಯಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾದ ಮೇಲೆ ಹೈದರಬಾದ್ ಕರ್ನಾಟಕ, ಮುಂಬಯಿ ಕರ್ನಾಟಕ ಬಿಟ್ಟರೆ ಹಳೇ ಮೈಸೂರು ಭಾಗದಲ್ಲಿ ೧೯೭೫ ರಿಂದ ಒಂದೇ ಒಂದು ಮಾರ್ಗವನ್ನು ರಾಷ್ಟ್ರೀಕರಣ ಮಾಡಿಲ್ಲ. ಬಸ್ಸುಗಳು ಸರ್ಕಾರಕ್ಕೇ ಸಿಗದೇ ಹೋದಾಗ ಖಾಸಗಿಯವರಿಗೆ ಹೇಗೆ ಸಿಕ್ಕುತ್ತವೆ ? ಅವರು ಹೊರ ದೇಶಗಳಿಂದ ತರುತ್ತಾರೆಯೆ ? ಸರ್ಕಾರಕ್ಕೆ ಏಕೆ ಬಸ್ಸುಗಳನ್ನು ತರುವುದಕ್ಕೆ ಆಗುವುದಿಲ್ಲ ? ತಪ್ಪು ಎಲ್ಲಿದೆ ಅಂದರೆ ಕಳೆದ ೨೫ ವರ್ಷಗಳಿಂದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಸಾರಿಗೆ ಸಂಸ್ಥೆಗೆ ಕೊಡಬೇಕಾದ ತನ್ನ ಪೇರುಗಳನ್ನು ಕೊಟ್ಟಿಲ್ಲ. ಬಸ್ಸುಗಳನ್ನು ಕಾಲಕಾಲಕ್ಕೆ ಖರೀದಿ ಮಾಡಲಿಲ್ಲ. ತಪ್ಪು ಆಡಳಿತದಿಂದ, ತಪ್ಪು ನಿರ್ಧಾರಗಳಿಂದ, ಈ ತೊಂದರೆಯನ್ನು ಇಂದು ಅನುಭವಿಸುತ್ತಿದ್ದೇವೆ. ಸರ್ಕಾರ ರಾಷ್ಟ್ರೀಕರಣದ ನೀತಿಯನ್ನು ಒಪ್ಪಿಕೊಂಡಿದೆ. ೧೫ ಕೋಟಿ ರೂಪಾಯಿ ಸಾಲ ತಂದು ಹೆಚ್ಚು ಬಸ್ಸುಗಳನ್ನಿಳಿಸಿ ಹಾಕಿ. ಖಾಸಗಿಯವರು ಅವರಿಗೆ ಇರತಕ್ಕ ಮಾರ್ಗಗಳಲ್ಲಿ ನಡೆಸಿಕೊಂಡು ಪೋಗಲಿ ಬಿಡಿ.

ಶ್ರೀ ಅಜೀಜ್ ಸೇಟ್.—ಸ್ವಾಮಿ, ರಾಷ್ಟ್ರೀಕರಣದ ಬಗ್ಗೆ ಮಾತನಾಡುತ್ತಿದ್ದಾರೆ. ಮಹಾತಪ್ಪು ಹಿಂದಿನಿಂದಲೂ ಆಗಿದೆ. ರಾಷ್ಟ್ರೀಕರಣವನ್ನು ಪೂರ್ತಿಯಾಗಿ ಎಲ್ಲೂ ಮಾಡಿಲ್ಲ. ಮೈಸೂರಿನಲ್ಲಿ ಒಂದು ಭಾಗ ಮಾತ್ರ ಆಗಿದೆ. ಇನ್ನೊಂದು ಭಾಗ ಆಗಿಲ್ಲ. ಚಿತ್ರದುರ್ಗದಿಂದ ಹುಬ್ಬಳ್ಳಿಯವರೆಗೆ ಆಗಿಲ್ಲ. ಮಂತ್ರಿ ಮಂತ್ರಿಗಳಿಗೆ ಅಪಲೇಟ್ ಅಥಾರಿಟಿ ಇತ್ತು. ಆದರೂ ನಿಜಲಿಂಗಪ್ಪನವರ ಕಾಲದಿಂದ ಕೂಡ ಅಪೀಲುಗಳು ಇತ್ಯರ್ಥವಾಗಿಲ್ಲ. ೩೫೦೦ ಬಸ್ಸುಗಳು ರೀಪ್ಲೇಸ್ ಆಗಿಲ್ಲ. ನಾನು ಎಲ್ಲ ಮಾರ್ಗಗಳನ್ನು ಡೀ ನ್ಯಾಷನಲೈಸ್ ಮಾಡಿ ಎಂದು ಹೇಳುವುದಿಲ್ಲ. ದೂರದ ಮಾರ್ಗಗಳನ್ನು ಸಾರಿಗೆ ಸಂಸ್ಥೆಯವರು ಇಟ್ಟುಕೊಂಡು, ಬೇರೆ ಮಾರ್ಗಗಳನ್ನು ಖಾಸಗಿಯವರಿಗೆ ಕೊಡಿ. ಇವತ್ತು ರಾಷ್ಟ್ರೀಕೃತ ಮಾರ್ಗಗಳಲ್ಲಿ ಖಾಸಗಿ ಬಸ್ಸುಗಳು ಓಡುತ್ತಿವೆ.

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೇ, ಮಾನ್ಯ ಬೊಮ್ಮಾಯಿ ಅವರು ಏನು ಹೇಳಿದರು ಅದು ನಿಜ. ಅದನ್ನು ನಾನು ಇಲ್ಲ ಅಂತ ಹೇಳುವುದಿಲ್ಲ. ಆ ಮಾತನ್ನು ಕಳೆದ ಸಾರಿ ಭಾಷಣ ಮಾಡಬೇಕಾದರೆ ನಾನೇ ಹೇಳಿದ್ದೇನೆ. ನನ್ನ ಡಿಮ್ಯಾಂಡ್ ಆದಮೇಲೆ ಮಂತ್ರಿತನ ಹೋಗಿದ್ದು. ಸರ್ಕಾರ ಹಣ ಸಹಾಯ ಮಾಡಿದರಲ್ಲಿ ಎಂಬುದನ್ನು ಒಪ್ಪಿಕೊಂಡಿದ್ದೇನೆ. ರಾಜ್ಯ ಸರ್ಕಾರ ಸಾಕಷ್ಟು ಹಣವನ್ನು ಸಾರಿಗೆ ಸಂಸ್ಥೆಗೆ ಕೊಟ್ಟಿಲ್ಲ, ಕೇಂದ್ರ ಸರ್ಕಾರದವರು ಅವರ ಮಂತಿಗೆಯನ್ನು ಕೊಟ್ಟಿಲ್ಲ ರಾಜ್ಯ ಸರ್ಕಾರ ಎರಡು ಕೋಟಿ ರೂಪಾಯಿ ಕೊಟ್ಟಿದ್ದರೆ. ಕೇಂದ್ರ ಸರ್ಕಾರ ಒಂದು ಕೋಟಿ ರೂಪಾಯಿ ಕೊಡುತ್ತಿತ್ತು. ರಾಜ್ಯ ಸರ್ಕಾರ ಮೂರು ಕೋಟಿ ರೂಪಾಯಿ ಕೊಟ್ಟಿದ್ದರೆ ಕೇಂದ್ರ ಸರ್ಕಾರ ಒಂದೂವರೆ ಕೋಟಿ ರೂಪಾಯಿ ಕೊಡುತ್ತಿತ್ತು. ಆದರೆ ಅದು ಆಗಲಿಲ್ಲ. ರಾಜ್ಯ ಸರ್ಕಾರವೂ ಕೊಟ್ಟಿಲ್ಲ ಬೇರೆ ಕಡೆ ಹಣದ ವ್ಯವಸ್ಥೆಯನ್ನು ಮಾಡಲಿಲ್ಲ ಅದರಿಂದ ಹಳೆಯ ಬಸ್ಸುಗಳನ್ನು ರೀಪ್ಲೇಸ್ ಮಾಡಲಿಕ್ಕೆ ಆಗಲಿಲ್ಲ. ವರ್ಷ ವರ್ಷ ರೀಪ್ಲೇಸ್ ಮಾಡುತ್ತಾ ಬಂದಿದ್ದರೆ ಈ ತರಹ ಆಗುತ್ತಿರಲಿಲ್ಲ. ಇನ್ನು ಸಾರಿಗೆ ಸಂಸ್ಥೆಯವರಿಗೆ ಬಾಸಿ ಸಿಕ್ಕದೆ ಖಾಸಗಿಯವರಿಗೆ ಹೇಗೆ ಬಾಸಿ ಸಿಕ್ಕುತ್ತವೆಂದು ಕೇಳಿದರು, ಇವೊತ್ತು ಪ್ರತಿಯೊಂದು ರಾಜ್ಯ ಸರ್ಕಾರಗಳಿಗೂ ಇಷ್ಟಷ್ಟು ಬಾಸಿ ಕೊಡಬೇಕು ಅಂತ ಇದೆ. ಖಾಸಗಿಯವರು ವೈಯಕ್ತಿಕವಾಗಿ ತೆಗೆದುಕೊಳ್ಳುವುದು ಇರುತ್ತದೆ. ಏಕೆಂದರೆ ನಮ್ಮಷ್ಟು ಬಸ್ಸುಗಳು ಅವರಿಗೆ ಬೇಕಾ

ಗಿರುವುದಿಲ್ಲ. ಆದ್ದರಿಂದ ಅವರಿಗೆ ಸಿಕ್ಕುತ್ತದೆ. ಇನ್ನು ಮಾನ್ಯ ಆಜೀಜ್ ಸೇಟ್ ಅವರು ಹೇಳಿದ ಮಾತು ನಿಜ. ೧೫ ವರ್ಷಗಳಿಂದ ಯಾವ ಮುಖ್ಯ ಮಂತ್ರಿಗಳು ರಾಷ್ಟ್ರೀಕರಣದ ಬಗ್ಗೆ ಮುಂದೆ ಬಂದಾಗ ಆಗಲಿಲ್ಲ, ರಾಜಕೀಯ ಪ್ರಭಾವದಿಂದಲೂ ಆಗಲಿಲ್ಲ ಎಂದರು. Let us accept it.

ಶ್ರೀ ಡಿ.ಟಿ. ಮಾಯಣ್ಣ.—ನೀವು ಅದನ್ನೇ ಕಂಟಿನ್ಯೂ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ನನಗೆ ಅನುಕೂಲ ಬೇಕು ಅಂದರೆ ಕಂಟಿನ್ಯೂ ಮಾಡುತ್ತೇನೆ. ಅನುಕೂಲ ಬೇಡ ಅಂದರೆ ಬಿಡುತ್ತೇನೆ. No Chief Minister whether it is Sri Nijalingappa, or Sri Jatti or Sri Devaraj Urs, could take a decision because of political pressure from bus owners from South Kanara, Mysore, Chitradurga etc. Some of the bus-owners themselves were legislatures. I don't blame anybody. Under these circumstances we will do what we can do.

Land for Agricultural Produce Market Committee in Dharwar Land for Cold Storage

662. SRI BHAVU RAO DESHPANDE (Dharwad).—Will the Minister of State for Marketing and Muzrai be pleased to state:—

(a) whether it is a fact that Dharwad Agriculture Produce Market Committee has granted one acre of leand for construction of Cold Storage ;

(b) if so, whether the said land have been handed over to Horticulture Department for construction of Cold Storage ;

(c) if not reasons for the same ;

(d) who purchased the land which is in possession of the Market Committee ?

SRI SUDHENDRA RAO KASABE (Minister of State for Marketing and Muzrai).—

(a) Yes.

(b) No.

(c) The Chief Marketing Officer, Bangalore had requested the Director of Horticulture to intimate whether he was agreeable to pay the value of the land m ant for the construction of Cold Storage on no loss and no profit basis. There was no response from the Horticulture Department regarding the payment of the cost of the land.

(d) Dharwad Marketing Committee had purchased this land according to the Land Acquisition Rules.

ಶ್ರೀ ಬಾವುರಾವ್ ದೇಶಪಾಂಡೆ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಶೈತ್ಯಾಗಾರಕ್ಕೆ ಒಂದು ಎಕರೆ ಜಮೀನು ಮಂಜೂರು ಮಾಡಿದ್ದು ನಿಜ ಅಂತ ಹೇಳಿದ್ದಾರೆ. ಆದರೆ ಆ ಜಮೀನನ್ನು ಶೈತ್ಯಾಗಾರ ಕಟ್ಟಲು ತೋಟಗಾರಿಕೆ ಇಲಾಖೆಯವರಿಗೆ ಕೊಟ್ಟಿಲ್ಲ ಅಂತ ಹೇಳಿದ್ದಾರೆ. ಮಾರ್ಕೆಟ್ ಸಮಿತಿಯವರು ಮೊದಲು ಇದನ್ನು ಕೊಡಬೇಕಾದರೆ ಬೆಲೆ ಏನಾದರೂ ನಿಗದಿ ಮಾಡಿದ್ದಾರೆ ?